# ಸಮಕಾಲೀನ ಕವಯಿತ್ರಿಯರಾದ ಲಲಿತಾ ಸಿದ್ಧಬಸವಯ್ಯ ಮತ್ತು ಪ್ರತಿಭಾ ನಂದಕುಮಾರ್ ಅವರ ಕಾವ್ಯ ಧ್ವನಿಯ ವಿಭಿನ್ನ ನೆಲೆ

ದಿವ್ಯಶ್ರೀ, ಬಿ.ಎನ್.[1] & ಅಣ್ಣಮ್ಮ[2]

[1]ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾವಿ, ತುಮಕೂರು.

[2]ಪ್ರಾಧ್ಯಾಪಕರು, ಡಾ.ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

DOI: https://doi.org/10.5281/zenodo.18816644

**ABSTRACT:**

1970–80ರ ದಶಕದ ಕನ್ನಡ ಕಾವ್ಯದಲ್ಲಿ ಮಹಿಳಾವಾದಿ ನೆಲೆಯ ವಿಭಿನ್ನ ಆಯಾಮಗಳನ್ನು ಪ್ರತಿಭಾ ನಂದಕುಮಾರ್ ಹಾಗೂ ಲಲಿತಾ ಸಿದ್ಧಬಸವಯ್ಯ ಅವರ ಕವಿತೆಗಳ ಮೂಲಕ ಇಲ್ಲಿ ವಿಶ್ಲೇಷಿಸಲಾಗಿದೆ. ಪ್ರತಿಭಾ ಅವರ 'ನಾವು ಹುಡುಗಿಯರೇ ಹೀಗೆ' ಕವಿತೆಯು ನಗರ ಕೇಂದ್ರಿತ, ತೀವ್ರ ಸ್ತ್ರೀವಾದಿ ಧೋರಣೆಯನ್ನು ಹೊಂದಿದ್ದು, ಹೆಣ್ಣಿನ ಸಂಕಟಗಳಿಗೆ ಪುರುಷಪ್ರಧಾನ ವ್ಯವಸ್ಥೆಯನ್ನೇ ಹೊಣೆಗಾರನಾಗಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಲಲಿತಾ ಅವರ 'ನಾವು ಹೆಂಗಸರೇ ಹೀಗೆ' ಕವಿತೆಯು ದೇಸಿ ಸೊಗಡಿನೊಂದಿಗೆ ಜೈವಿಕ ವಾಸ್ತವಗಳನ್ನು ತೆರೆದಿಡುತ್ತದೆ; ಇಲ್ಲಿ ಪುರುಷ ದ್ವೇಷದ ಬದಲು ಹೆಣ್ಣು ತನ್ನನ್ನು ತಾನು ವಿಮರ್ಶಿಸಿಕೊಳ್ಳುತ್ತಾ, ಕುಟುಂಬದ ಚೌಕಟ್ಟಿನಲ್ಲಿಯೇ ಸಮಾನತೆಯನ್ನು ಕಂಡುಕೊಳ್ಳುವ ತಾತ್ವಿಕತೆಯಿದೆ. ಒಂದೇ ಆಶಯವನ್ನು ಭಿನ್ನ ದೃಷ್ಟಿಕೋನ ಹಾಗೂ ಭಾಷಿಕ ಶೈಲಿಯಲ್ಲಿ ಕಟ್ಟಿಕೊಟ್ಟಿರುವ ಈ ಕವಯಿತ್ರಿಯರ ಕಾವ್ಯಶಕ್ತಿ ಮತ್ತು ಅಭಿವ್ಯಕ್ತಿ ಕ್ರಮಗಳ ತುಲನಾತ್ಮಕ ನೋಟವನ್ನು ಪ್ರಸ್ತುತಪಡಿಸಲಾಗಿದೆ.

**KEYWORDS:**

ಮಹಿಳಾವಾದ, ಸಮಕಾಲೀನ ಕಾವ್ಯ, ಸ್ತ್ರೀ ಸಂವೇದನೆ, ಪ್ರತಿಭಾ ನಂದಕುಮಾರ್, ಲಲಿತಾ ಸಿದ್ಧಬಸವಯ್ಯ.

ಮಹಿಳಾವಾದದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ 70 ಮತ್ತು 80 ರ ದಶಕ ಆಧುನಿಕ ಜೀವನ ಶೈಲಿಯ ಚಿಂತನಾ ಕ್ರಮದಿಂದ ಹೊಸ ಆಲೋಚನಾ ದೃಷ್ಟಿಕೋನಗಳನ್ನು ಹುಟ್ಟಿ ಹಾಕಿದ ಕಾಲಘಟ್ಟ, ಈ ಕಾಲಘಟ್ಟದಲ್ಲಿ ಬಂದ ಪ್ರಸಿದ್ಧ ಕವಯಿತ್ರಿಯರೆಂದರೆ ಪ್ರತಿಭಾ ನಂದಕುಮಾರ್, ಲಲಿತಾ ಸಿದ್ಧಬಸವಯ್ಯ, ಎಂ. ಆರ್. ಕಮಲ, ಡಾ. ಎಚ್.ಎಲ್.ಪುಷ್ಪ.

ಈ ಕವಯಿತ್ರಿಯರಲ್ಲಿ ಅತಿ ಹೆಚ್ಚು ವಿಭಿನ್ನ ನೆಲೆಯ ಜೀವನಶೈಲಿ, ಧೋರಣೆ ಮತ್ತು ದೃಷ್ಟಿಕೋನ ಹೊಂದಿರುವವರು ಪ್ರತಿಭಾ ನಂದಕುಮಾರ್ ಮತ್ತು ಲಲಿತಾ ಸಿದ್ಧಬಸವಯ್ಯ ಈ ಇಬ್ಬರು ಕವಯಿತ್ರಿಯರ ವಿಭಿನ್ನ ನೆಲೆಯ ಧ್ವನಿ ಸಾಮ್ಯತೆ ಮತ್ತು ವ್ಯತ್ಯಾಸವನ್ನು ಅವರ ಕಾವ್ಯ ಕೃಷಿಯ ಮುಖಾಂತರ ಗುರುತಿಸಿದ್ದೇನೆ.

1. ಇಬ್ಬರು ಕವಯಿತ್ರಿಯರ ಜೀವನ ದೃಷ್ಟಿಕೋನದಲ್ಲಿಯೇ ಮೂಲ ವ್ಯತ್ಯಾಸವಿರುವಂಥದ್ದು
2. ಇಬ್ಬರು ಕವಯಿತ್ರಿಯರು ನಾನ್ ಅಕಾಡೆಮಿಕ್ ವಲಯದಿಂದ ಬಂದು, ಈ ತರಹವು ಕಾವ್ಯ ಬರೆಯಬಹುದು ಎಂದು ತೋರಿಸಿ, ಅಲ್ಲಿಯವರೆಗೆ ಬಂದ ಕಾವ್ಯದ ಏಕತಾನತೆಯನ್ನು ಬಿಟ್ಟು, ಬೆಚ್ಚಿ ಬೀಳಿಸುವ ಕವಿತೆಗಳನ್ನು ಬರೆದು ತೋರಿಸಿದಂತಹ ಇಬ್ಬರದು ದಿಟ್ಟ ಧ್ವನಿ,
3. ಆದರೆ ಇಬ್ಬರ ಧ್ವನಿಯಲ್ಲಿ ವ್ಯತ್ಯಾಸವಿದೆ, ಪ್ರತಿಭಾ ಅವರದು ನಗರದ ದಿಟ್ಟತೆ, ಪೇಟೆಯ ಧ್ವನಿ, ತೀವ್ರವಾದ ಸ್ತ್ರೀವಾದಿ, ಮೇಲ್ಜಾತಿಯ ಮಾಧ್ವ ಬ್ರಾಹ್ಮಣ ದಿವಾನ್ ವಿ.ಪಿ.ಮಾಧವರಾವ್ ಕುಟುಂಬದ ಮೊಮ್ಮಗಳು, ಇಂಗ್ಲೀಷ್ ಭಾಷೆ ಇವರಿಗೆ "ಮೀನು ನೀರಿನಲ್ಲಿ ಈಜುವಷ್ಟು ಸಹಜವಾಗಿದೆ" ಆಧುನಿಕ ಜೀವನ ಶೈಲಿಯ ವಿವಾಹೇತರ ಸಂಬಂಧಗಳ ಬಗ್ಗೆ ಮುಕ್ತವಾದ ಧ್ವನಿ.
4. ಲಲಿತಾ ಸಿದ್ಧಬಸವಯ್ಯನವರದು ದೇಸಿ ಸತ್ವದಿಂದ ಬಂದಿರುವ ಜಾನಪದ ಸೊಗಡಿನ ನೆಲ ಮೂಲ ಸಂಸ್ಕೃತಿಯ ದಿಟ್ಟತೆ ಮತ್ತು ಅಪ್ಪಟ ದೇಸಿ ಪ್ರತಿಭೆಯ ಶೈಲಿ, ಅಬ್ಬರದ ಸ್ತ್ರೀವಾದದ ಸಪ್ಪಳ ಇಲ್ಲದ, ತುಂಬಾ ಧ್ವನಿ ಪೂರ್ಣವಾದ ನುಡಿಗಟ್ಟುಗಳಿಂದ ಕೂಡಿರುವ ಕಾವ್ಯ, ಜೊತೆಗೆ ಕೌಟುಂಬಿಕ ಚೌಕಟ್ಟಿನೊಳಗಿನ ನಿರ್ಭಿಡೆ. ಈ ಹಿನ್ನೆಲೆಯಲ್ಲಿ ಇಬ್ಬರೂ ಕವಯಿತ್ರಿಯರ ಒಂದೊಂದು ಕವಿತೆಗಳನ್ನು ವಿಭಿನ್ನ ನೆಲೆಯ ಧ್ವನಿಯಾಗಿ ಗುರುತಿಸಿದ್ದೇನೆ.

70 – 80ರ ದಶಕದ ಕಾಲಘಟ್ಟದಲ್ಲಿ ಅತ್ಯುತ್ತಮವಾದ ಕಾವ್ಯವನ್ನು ಬರೆಯುವ ಇಬ್ಬರೂ ಲೇಖಕಿಯರು ಮಹಿಳಾಪರ ಚಿಂತನೆಯುಳ್ಳ ಹಲವಾರು ಕವಿತೆಗಳನ್ನು ಸಾಹಿತ್ಯ ಕೃಷಿ ಮಾಡಿದ್ದಾರೆ, ಇಬ್ಬರದು ಭಿನ್ನ ನೆಲೆಯ ವಿಭಿನ್ನ ದೃಷ್ಟಿಕೋನದ ತಾತ್ವಿಕತೆಯ ನೆಲೆ, ಪ್ರತಿಭಾ ನಂದಕುಮಾರ್ ಅವರ "ನಾವು ಹುಡುಗಿಯರೇ ಹೀಗೆ " ಈ ಕವಿತೆ, ಮತ್ತು ಲಲಿತಾ ಸಿದ್ಧಬಸವಯ್ಯನವರ "ನಾವು ಹೆಂಗಸರೇ ಹೀಗೆ" ಕವಿತೆ ಈ ಎರಡು ಕವಿತೆಗಳು ಮಹಿಳಾಪರವಾದ ತಾತ್ವಿಕತೆಯನ್ನು ಧ್ವನಿಸುತ್ತವೆ, ಆದರೆ

ಅದನ್ನು ಅಭಿವ್ಯಕ್ತ ಪಡಿಸುವ ದಾರಿ ಬೇರೆ, ಬೇರೆ, ಪ್ರತಿಭಾ ನಂದಕುಮಾರ್ ಅವರ ಕವಿತೆಯಲ್ಲಿ "ತೀವ್ರವಾದ ಮತ್ತು ಪುರುಷ ಪ್ರಧಾನ ಸಮಾಜದ ಸ್ತ್ರೀ ವಿರೋಧಿ ನೆಲೆಯ ಅಬಲೆತನಕ್ಕೆ ಪುರುಷನೇ ಕಾರಣ ಎನ್ನುವ ಬಲವಾದ ಧೋರಣೆಯನ್ನು ಎತ್ತಿ ಹಿಡಿಯುತ್ತದೆ".

ಆದರೆ ಲಲಿತಾ ಸಿದ್ಧಬಸವಯ್ಯನವರ "ನಾವು ಹೆಂಗಸರೇ ಹೀಗೆ" ಎನ್ನುವ ಕವಿತೆ ಮಹಿಳಾವಾದದ ತಾತ್ವಿಕತೆಯ ಹಿನ್ನೆಲೆಯಲ್ಲಿ ಬರೆದರೂ, ಇವರ ತಾತ್ವಿಕತೆ ನಿಂತಿರುವುದೇ "ಜೀವಶಾಸ್ತ್ರದ ತಾಯಿ ಬೇರಿನ ಮೇಲೆ" ಮಹಿಳೆಯರ ದುರ್ಬಲತೆಗೆ ಪುರುಷ ಕಾರಣ ಅಲ್ಲ, ಮಹಿಳೆ ಪುರುಷರಿಗೆ ಸರಿ ಸಮಾನವಾಗಿ ಇರಬೇಕಾದರೆ ಸಮಾನತೆಯ ಕಡೆ ಹೆಜ್ಜೆಯನ್ನಿಡುವ ತನ್ನ ಅಸ್ಮಿತೆಯ ಅಸ್ತಿತ್ವದ ದಾರಿಯನ್ನು ಕಂಡುಕೊಳ್ಳಬೇಕು ಎನ್ನುವ ಚಿಂತನೆ, ಇವರ ಪ್ರಕಾರ ಸ್ತ್ರೀವಾದ ಎಂದರೆ "ಪುರುಷ ದ್ವೇಷ ಅಲ್ಲ ಪುರುಷನಿಗೆ ಇರುವ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಕೇಳುವುದೇ ಹೊರತು, ಬೇರೆಯಲ್ಲ"

ಪ್ರತಿಭಾ ನಂದಕುಮಾರ್ ಅವರ ಪ್ರಸಿದ್ಧ ಕವಿತೆ "ನಾವು ಹುಡುಗಿಯರೇ ಹೀಗೆ" ಬರೆಯಲ್ಪಟ್ಟ ಕಾಲ 70 – 80 ರ ದಶಕ, ಈ ಸಂದರ್ಭದಲ್ಲಿ ಆಧುನಿಕ ಕಾಲಘಟ್ಟಕ್ಕೆ ತೀವ್ರವಾಗಿ ಮಹಿಳೆಯರು ತೆರೆದುಕೊಳ್ಳುತ್ತಿದ್ದ ಕಾಲ, ಜನ ಲಂಗ ದಾವಣಿ ಎತ್ತಾಗೆ ಹೋಯ್ತು ಹುಡುಗಿಯರೆ ಎಂದು ಕೇಳುವ ಕಾಲ ಗಂಡಿನ ಮೂಗುದಾರಕ್ಕೆ ಕಟ್ಟು ಬಿದ್ದ ಹೆಣ್ಣು, ತನ್ನ ಸಂಕಥನವನ್ನು ಹೇಳಿಕೊಳ್ಳಲಾಗದೆ ಇದ್ದ ಕಾಲ, ಅಂದಿನ ಹೆಣ್ಣು ಮಕ್ಕಳ ಒಳ ಮನಸ್ಸಿನ ಬೇಗುದಿಯ ತಳಮಳವನ್ನು ಇಬ್ಬರು ಗೆಳತಿಯರ ನಡುವೆ ನಡೆಯುವ ಸಂವಾದದ ರೀತಿಯಲ್ಲಿ ಕಟ್ಟಿಕೊಟ್ಟಿರುವ ರೀತಿ ಆ ಕಾಲಕ್ಕೆ ಇದು ವಿಭಿನ್ನ ನೆಲೆಯ ಧ್ವನಿ. ಆ ದಶಕದಲ್ಲಿ ಹೆಣ್ಣು ಹೊರಗೆ ಬರುವುದೇ ಅಪರೂಪ, ಬಂದರೂ ಮುಕ್ತವಾಗಿ ವ್ಯವಸ್ಥೆಯೊಳಗೆ ಮಾತನಾಡುವಂತೆ ಇರಲಿಲ್ಲ, ಆ ವ್ಯವಸ್ಥೆಯೊಳಗೆ ತಾನು ಇಷ್ಟ ಪಟ್ಟ ವ್ಯಕ್ತಿಗೆ ತನ್ನ ಪ್ರೀತಿಯನ್ನು ನಿವೇದನೆ ಮಾಡಿಕೊಳ್ಳುವುದು ಸುಲಭದ ಮಾತಲ್ಲ, ಅಂತಹ ಭಾವನೆಗಳನ್ನು ಹೇಳಿಕೊಳ್ಳಲಾಗದ ಪರಿಸ್ಥಿತಿಯನ್ನು ಬಹಳ ಸೂಕ್ಷ್ಮವಾಗಿ ನವಿರಾಗಿ ಹೃದಯಕ್ಕೆ ಮುಟ್ಟುವಂತೆ ಪ್ರತಿಯೊಬ್ಬರ ಮನಸ್ಸಿಗೂ ನಾಟುವಂತೆ ಕಟ್ಟಿಕೊಟ್ಟಿದ್ದಾರೆ ಪ್ರತಿಭಾ ನಂದಕುಮಾರ್.

ಇಡೀ ಕವಿತೆ ವ್ಯವಸ್ಥೆಯ ಒಳಗಿನ ಹೆಣ್ಣಿನ ಆಲೋಚನಾ ಕ್ರಮಗಳು, ಹೆಣ್ಣು ತನ್ನ ಭಾವನೆಗಳನ್ನು, ನೋವುಗಳನ್ನು, ದುಃಖಗಳನ್ನು, ಆಕಾಂಕ್ಷೆಗಳನ್ನು ಹೇಳಿಕೊಳ್ಳಲಾಗದೆ ತನ್ನ ಒಳಗೆ ಹೇಗೆ ಅದುಮಿಟ್ಟುಕೊಂಡಿದ್ದಳು, ಆ ಭಾವನೆಗಳನ್ನು ಗೆಳತಿಯೊಂದಿಗೆ ಹೇಳುವ ಧಾಟಿಯಲ್ಲಿ ಈ ಕವಿತೆ ಪ್ರಾರಂಭವಾಗುತ್ತದೆ ಇಡೀ ಕವಿತೆಯನ್ನು ಎರಡು ಭಾಗಗಳಾಗಿ ಕಟ್ಟಿಕೊಟ್ಟಿದ್ದಾರೆ.

**ಹೌದು ಕಣೆ ಉಷಾ,**
**ನಾವು ಹುಡುಗಿಯರೇ ಹೀಗೆ,**
**ನಾವು ಬದಲಾಗುವುದಿಲ್ಲ**

ಏಕೆಂದರೆ ಈ ವ್ಯವಸ್ಥೆ ಹೆಣ್ಣನ್ನು ನಾಲ್ಕು ಗೋಡೆಯ ಮಧ್ಯೆ, ಬೇರೆ ಬೇರೆ ಕಬಂಧ ಬಾಹುಗಳಲ್ಲಿ ಹೇಗೆ ಹಿಡಿದಿಟ್ಟುಕೊಂಡಿದೆ, ನಮ್ಮನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಲು ಈ ವ್ಯವಸ್ಥೆ ಕಂಡುಕೊಂಡ ಅಸ್ತ್ರ ಹೊಗಳಿಕೆ. ನಮ್ಮ ಆಲೋಚನೆಗಳು ನಮ್ಮೊಳಗೆ ನಮಗೆ ಅರಿವಿಲ್ಲದೆ ಸ್ಫೂರ್ತಿ ಪುಳಕಗಳನ್ನುಂಟು ಮಾಡುತ್ತದೆ ಅವುಗಳನ್ನು ನಾವು ಡಬ್ಬಿಯೊಳಗೆ ಇಟ್ಟು ಭದ್ರವಾಗಿ ಮುಚ್ಚಿಡುವಂತೆ ಅದುಮಿಟ್ಟುಕೊಂಡಿದ್ದೇವೆ ನಮ್ಮ ಭಾವನೆಗಳನ್ನೇ ಗಟ್ಟಿ ಮಾಡಿಕೊಂಡಿದ್ದೇವೆ, ಹೇಳಬೇಕು ಅಂತ ಹೊರಟಾಗ ಈ ವ್ಯವಸ್ಥೆ ನಮ್ಮನ್ನು ಬಂಧಿಸುತ್ತಿದೆ ಮುಕ್ತವಾಗಿ ವ್ಯಕ್ತಪಡಿಸಲು ಸಾಧ್ಯವಾಗದ ಪರಿಸ್ಥಿತಿಯನ್ನು ತಂದೊಡ್ಡಿದೆ ಎನ್ನುವ ಸತ್ಯವನ್ನು, ಅಂದಿನ ಕಾಲದ ಹೆಣ್ಣು ಮಕ್ಕಳ ಭಾವನೆಗಳ, ತುಮುಲಗಳನ್ನು ಕವಿತೆ ಕಟ್ಟಿಕೊಡುತ್ತದೆ,

**ನಾಲ್ಕು ವರ್ಷಗಳಲ್ಲಿ ವಿಪರೀತ ದಪ್ಪವಾಗಿ 'ಅವನು 'ಸಿಗುತ್ತಾನೆ**
**ನಮ್ಮ ಇಂದಿನ ಅವಸ್ಥೆಗೆ ಇವನೇ ಕಾರಣ**
**ಅಂತ ರೋಷ ತಾಳುತ್ತೇವೆ. ಆದರೆ ಮೇಲೆ ನಗುನಗುತ್ತಾ 'ಅವನ '**
**ಹೆಂಡತಿ ಮಕ್ಕಳ ಯೋಗಕ್ಷೇಮ ವಿಚಾರಿಸುತ್ತೇವೆ ಯಾಕೆಂದರೆ**
**ಅವಳದೂ...**
**ಅದೇ ಕಥೆಯಲ್ಲವೇ?**
**ನಾವು ಹುಡುಗಿಯರೇ ಹೀಗೆ**

ಹೆಣ್ಣಿನ ಈ ಸ್ಥಿತಿಯ ಅವಸ್ಥೆಗೆ ಪುರುಷನೇ ಕಾರಣ ಎಂಬ ಬಲವಾದ ಧೋರಣೆ ಇಲ್ಲಿದೆ, ಆ ಹೆಣ್ಣು ಮಗಳಿಗೆ ಪ್ರಿಯತಮನನ್ನು ನೋಡಿದಾಗ ಬರುವ ಸಿಟ್ಟು, ಆಕ್ರೋಶ, ಆದರೆ ವ್ಯಕ್ತಪಡಿಸಲು ಸಾಧ್ಯವಾಗುತ್ತಿಲ್ಲ ಏಕೆಂದರೆ ಪಕ್ಕದಲ್ಲಿ ಅವನ ಹೆಂಡತಿ ಮಕ್ಕಳು, ಅವರನ್ನು ನೋಡಿ ತನ್ನ ಕೋಪ ಮರೆಮಾಚುತ್ತಾಳೆ, "ಏಕೆಂದರೆ" ಅವಳದೂ ಅದೇ ಕಥೆಯಲ್ಲವೇ? ಅವಳೂ, ಹೆಣ್ಣಲ್ಲವೇ ಈ ಮಾತು ಆ ಕಾಲದ ಪ್ರತಿಯೊಬ್ಬ ಹೆಣ್ಣು ಮಗಳ ಪರಿಸ್ಥಿತಿಯೂ ಇದೆ ಎನ್ನುವ ಮಾರ್ಮಿಕತೆಯ ಒಳಮರ್ಮವನ್ನು ಧ್ವನಿಸುತ್ತದೆ. ಹಾಗಾದರೆ ನಾವು ಮಾಡಬೇಕಾದ್ದು ಏನು? ಈ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಲೇ ಬೇಕು, ನಮ್ಮ ಬದುಕಿನ ಒಳಗೆ ಭಾವನೆಗಳನ್ನು ಅದುಮಿಟ್ಟುಕೊಂಡು ಎಷ್ಟು ದಿನ ಅಂತ ಬದುಕುವುದು ಹೀಗೆ? ಎಂದು ಹೆಣ್ಣಿನ ಅಂತರಂಗದ ವಿಚಾರಗಳನ್ನು, ಒಂಟಿತನದ ತುಮುಲ, ಚಡಪಡಿಕೆಗಳನ್ನು ಒಬ್ಬ ಪ್ರತಿನಿಧಿಯಾಗಿ ಕವಯಿತ್ರಿ ಗೆಳತಿಯ ಜೊತೆ ಮಾತನಾಡುವ ಧಾಟಿಯಲ್ಲಿ ಈ ಕವಿತೆಯನ್ನು ಕಟ್ಟಿಕೊಟ್ಟಿರುವುದು ವಿಶೇಷ,

ಆದರೆ ಲಲಿತಾ ಸಿದ್ಧಬಸವಯ್ಯನವರ "ನಾವು ಹೆಂಗಸರೇ ಹೀಗೆ "ಎನ್ನುವ ಕವಿತೆ ಮಹಿಳಾವಾದದ ತಾತ್ವಿಕತೆಯ ಹಿನ್ನೆಲೆಯಲ್ಲಿ ಬರೆದರೂ, ಸಮಾನತೆಯ ಕಡೆ ಹೆಜ್ಜೆಯನ್ನಿಡುವ ತನ್ನ ಅಸ್ಮಿತೆಯ ಅಸ್ತಿತ್ವದ ದಾರಿಯನ್ನು ತಾನೇ ಕಂಡುಕೊಳ್ಳಬೇಕು ಎನ್ನುವ ಚಡಪಡಿಕೆ, ಅದು ಹೇಗೆಂದರೆ ಈ ಕವಿತೆಯಲ್ಲಿ ಬರುವ ಹೆಂಗಸು ತನ್ನನ್ನು ತಾನು ಮತ್ತೆ ಮತ್ತೆ ಪರೀಕ್ಷಿಸಿಕೊಳ್ಳುವಂತದ್ದು, ಅವಳ ಅಡುಗೆ ಮನೆಯ ಕಾಯಕದ ಕೃಷಿಯಲ್ಲಿ, 70 ರ ವಯಸ್ಸಿನಲ್ಲಿಯೂ ತನ್ನ ವೃತ್ತಿಯಲ್ಲಿ ತಾನು ಮಾಡುವ

ತಪ್ಪುಗಳನ್ನು ನೆನೆದು ಅಳುವಂಥದ್ದು, ತನ್ನನ್ನು ತಾನು ಸುಧಾರಿಸಿಕೊಳ್ಳುವ, ತಿದ್ದುವ ನೆಲೆಯಲ್ಲಿಯೇ ಇಡೀ ಕವಿತೆ ಮೂಡಿ ಬಂದಿರುವುದು ವಿಶೇಷ, ನಾನು ಸುಧಾರಿಸಿದರೆ ನನ್ನ ಜೊತೆ ಇರುವ ಪುರುಷ ನನ್ನಂತೆ ಇರಬಲ್ಲ ಎನ್ನುವ ತಾತ್ವಿಕ ನೆಲೆಯ ಜೊತೆಗೆ ಜೈವಿಕ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಹೆಣ್ಣಿನ ಕರ್ತವ್ಯ ಪ್ರಜ್ಞೆಯನ್ನು ಕವಿತೆ ಎತ್ತಿ ಹಿಡಿಯುತ್ತದೆ.

**ನಾವು ಹಳೆಯವರು ಹೀಗೆ**
**ಎಂದುಕೊಂಡಿದ್ದೆ : ಸೊಸೆಯು ಒದ್ದಾಡುತ್ತಾಳೆ**
**ಟೀವಿಯಲಿ ಕಲಿತ ಹೊಸದನು ಒವನ್ನಿನಲಿಳಿಸಿ**
**ಚಡಪಡಿಸುತ್ತಾಳೆ ನಾವು ವ್ಯಾಖ್ಯಾನಿಸುವ ತನಕ!**
**ಮಗಳೂ ಅಷ್ಟೇ! ಗಳಿಗೆಗೊಂದು ಸಲ ಕೇಳುತ್ತಾಳೆ**
**ತುತ್ತು ಇನ್ನೂ ಕೈಯೊಳಗಿದ್ದ ಹಾಗೆ**
**ಅಮ್ಮ ಹೇಗಿದೆ? ಅಮ್ಮ ಹೇಗಿದೆ?**
**ಕಾಲ ಬದಲಾಯಿತೇ?**
**ಅಥವಾ**
**'ನಾವು ಹುಡುಗಿಯರೇ ಹೀಗೆ ''**
**ಮರುಕಳಿಸಿತೇ?**

ಇಲ್ಲಿ ಮಹಿಳಾವಾದವನ್ನು ಹೇಳುವಾಗ ಇನ್ನೊಬ್ಬರನ್ನು ಮತ್ತೊಬ್ಬರನ್ನು ದ್ವೇಷಿಸುತ್ತಿಲ್ಲ 70 ರ ವಯಸ್ಸಿನವರೆಲ್ಲ ಅಂದುಕೊಂಡಿದ್ದರು, ಹೀಗೆ ಅಂತ ನಾನು ಅಷ್ಟೇ, ನನ್ನ ಅತ್ತೆ, ಹಿಂದಿನ ಮೂರು ತಲೆಮಾರಿನವರು, ಅಲ್ಲ ! ಇನ್ನು ಹತ್ತು ತಲೆಮಾರು ಆದರೂ ಇಷ್ಟೇ ಗಂಡ ಮಕ್ಕಳನ್ನು ಮೆಚ್ಚಿಸುವುದು, ಇನ್ನು ನನ್ನ ಮುಂದಿನ ತಲೆಮಾರಿನ ಸೊಸೆ ಕೂಡ, ಮಹಿಳೆಯರಿಗೆ ಪರಂಪರೆಯಿಂದ ಬಂದ ಜೈವಿಕ ತಾತ್ವಿಕತೆಯ ಹಿನ್ನೆಲೆಯ ಚಡಪಡಿಕೆ, ಇದರಲ್ಲಿಯೇ ಅವಳ ಖುಷಿ, ಪ್ರೀತಿ, ಪ್ರೇಮ, ದುಃಖ ಹೀಗೆ ಸಂಸಾರದ ವಿವಿಧ ಮಜಲುಗಳನ್ನು ತಿಳಿಸುತ್ತಲೇ, ಆಕೆಯ ಶ್ರಮ ಪಡುವ ಕಾರ್ಯ ವೈಖರಿಯನ್ನು ಧ್ವನಿಸುತ್ತದೆ, ಹೆಣ್ಣು ತಾನು ಏನೇ ಮಾಡಿದರು ಅದು ಇನ್ನೊಬ್ಬರ ಪ್ರಶಂಸೆಯನ್ನು ಬಯಸಿಯೇ ನಿಂತಿರುತ್ತದೆ ಅದು ಒಂದು ತಲೆಮಾರು ಅಷ್ಟೇ ಅಲ್ಲ, ಇನ್ನು ಎಷ್ಟು ತಲೆಮಾರು ಉರುಳಿದರೂ ಹಾಗೆ, ಕಾಲ ಬದಲಾಗಿದೆ ಆದರೆ ಹೆಣ್ಣಿನ ಚಡಪಡಿಕೆ ಹೋಗಿಲ್ಲ, ಅವರ ನಂತರದ ತಲೆಮಾರಿನ ಮಗಳು ಅಷ್ಟೇ ಗಳಿಗೆಗೊಂದು ಸಲ ಕೇಳುತ್ತಾಳೆ, ತುತ್ತು ಇನ್ನೂ ಕೈಯಲ್ಲಿದ್ದ ಹಾಗೆ ಅಮ್ಮ ಹೇಗಿದೆ? ಅಂತ, ಇದು ಒಂದು ಜೈವಿಕ ಲಕ್ಷಣ, ಹೆಣ್ಣು ಈ ಗುಣಲಕ್ಷಣಗಳನ್ನು ಬಿಟ್ಟು ಬದುಕನ್ನು ಸಾರ್ಥಕಗೊಳಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಮಾರ್ಮಿಕ ಸಂದೇಶವನ್ನು ಕವಿತೆ ಕೊಡುತ್ತದೆ, ಇದಕ್ಕೆ ಪುರುಷ ಕಾರಣ ಅಲ್ಲ, ನಾವೇ ಪುರುಷರಿಗೆ ಸರಿ ಸಮಾನವಾಗಿ ಇರಬೇಕು ಎನ್ನುವ ಚಿಂತನೆಯ ನೆಲೆ, ಹೆಣ್ಣು ಸರಿ ಇದ್ದರೆ ಗಂಡು ಸರಿ ಇರುತ್ತಾನೆ ಎನ್ನುವ ವಾದ, ಒಂದು ಸಂಸಾರಕ್ಕೆ ಹೆಣ್ಣು ಎಷ್ಟು ಮುಖ್ಯವೋ ಗಂಡು ಅಷ್ಟೇ ಮುಖ್ಯ ಇಬ್ಬರೂ ಸರಿಯಾದ ನೆಲೆಯಲ್ಲಿ ಸಮಾನ ಮನಸ್ಥಿತಿಯಿಂದ ಕೂಡಿರಬೇಕು ಎನ್ನುವ ತಾತ್ವಿಕ ನೆಲೆಯನ್ನು ಈ ಕವಿತೆ ಧ್ವನಿಸುತ್ತದೆ. ಹೀಗೆ ಈ ಎರಡು

ಕವಿತೆಗಳಲ್ಲಿ ಮೂಡಿ ಬಂದಿರುವ ತಾತ್ವಿಕ ಅಂಶಗಳನ್ನು ಇಟ್ಟುಕೊಂಡು ಸಮಕಾಲೀನ ಕವಯಿತ್ರಿಯರ ವಿಭಿನ್ನ ನೆಲೆಯ ಧ್ವನಿಯನ್ನು ಗುರುತಿಸಲಾಗಿದೆ.

## ಪರಾಮರ್ಶನ ಗ್ರಂಥಗಳು:

1. ಪ್ರತಿಭಾ ನಂದಕುಮಾರ್, (2020), ಪ್ರತಿಭಾ ಕಾವ್ಯ: ಇಲ್ಲಿಯವರೆಗಿನ ಕವಿತೆಗಳು, ಬೆಂಗಳೂರು: ಅಂಕಿತ ಪುಸ್ತಕ.
2. ಲಲಿತಾ ಸಿದ್ಧಬಸವಯ್ಯ, (2020), ಕರೆ ಪಾರಕ್ಕ ಮತ್ತು ಇತರೆ ಕವಿತೆಗಳು, ತುಮಕೂರು: ಚಿನ್ಮಯಿ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.